157 ಸೆ (152) LRL 2703

# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ವಿವೇಕಾನಂದ ಇವರು ನಿಯಮ 72 ರ ಮೇರೆಗೆ ಮಂಡಿಸಿರುವ ಗಮನ ಸೆಳೆಯುವ ಸಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಉತ್ತರ.**

**ವಿಷಯ:** ರಾಜ್ಯದ ಗ್ರಾಮೀಣಾಭಿವೃದ್ಧಿ ವ್ಯಾಪ್ತಿಗೆ ಬರುವ ಗ್ರಾಮ ಪಂಚಾಯಿತಿಗಳಲ್ಲಿ, 2008 ರ ಪ್ರಕಾರ ಪೂರ್ವ ಅನುಮೋದನೆ ಪಡೆದು ಹಾಗೂ ಅನುಮೋದನೆ ಪಡೆಯದೇ ಗ್ರಾಮ ಪಂಚಾಯಿತಿ ನೌಕರರುಗಳಾದ, ಬಿಲ್ ಕಲೆಕಕ್ಟರ್ ಗಳು, ಕಂಪ್ಯೂಟರ್ ಆಪರೇಟರ್ ಗಳು ಹಾಗೂ ವಾಟರ್ ಮ್ಯಾನ್‌ಗಳ ಎಷ್ಟು ಸಿಬ್ಬಂದಿಗಳು ಈ ಸಾಲಿನಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಇವರಿಗೆ ಯಾವ ಯಾವ ರೀತಿಯಲ್ಲಿ ವೇತನವನ್ನು ನೀಡಲಾಗುತ್ತಿದೆ ಹಾಗೂ 2008 ರ ಪ್ರಕಾರ ಪೂರ್ವ ಅನುಮೋದನೆ ಪಡೆದು ಹಾಗೂ ಅನುಮೋದನೆ ಪಡೆಯದೇ ಆಯ್ಕೆಗೊಂಡಿರುವ ಮೇಲೆ ಹೇಳಿರುವ ಎಲ್ಲಾ ವೃಂದದ ನೌಕರರುಗಳ ಪೂರ್ಣ ವಿವರಗಳನ್ನು ತಾಲ್ಲೂಕುವಾರು ನೀಡಬೇಕೆಂದು ಹಾಗೂ ಇವರ ಸಮಸ್ಯೆಗಳ ಬಗ್ಗೆ.

====

**ಉತ್ತರ:** ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ 2008 ರ ನಂತರದಲ್ಲಿ ಪೂರ್ವ ಅನುಮೋದನೆ ಪಡೆದು ಹಾಗೂ ಅನುಮೋದನೆ ಪಡೆಯದೆ ಗ್ರಾಮ ಪಂಚಾಯಿತಿ ನೌಕರರುಗಳಾದ, ಬಿಲ್ ಕಲೆಕ್ಟರ್‌ಗಳು, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ಹಾಗೂ ವಾಟರ್ ಆಪರೇಟರ್‌ಗಳ ತಾಲ್ಲೂಕುವಾರು ಕ್ರೋಢೀಕೃತ ಮಾಹಿತಿಯನ್ನು ಪ್ರತ್ಯೇಕವಾಗಿ ಪೆನ್‌ಡ್ರೈವ್ ನಲ್ಲಿ ಅಳವಡಿಸಿ ಅನುಬಂಧ-1 ರಲ್ಲಿ ನೀಡಿದೆ.

ಗ್ರಾಮ ಪಂಚಾಯಿತಿ ನೌಕರರುಗಳ ಸಮಸ್ಯೆಗಳಿಗೆ ಸಂಬಂಧಿಸಿದಂತೆ ವಿವಿಧ ವೃಂದ ಸಂಘಗಳು ಹಲವು ಬೇಡಿಕೆಗಳ ಈಡೇರಿಕೆಗಾಗಿ ಮನವಿಗಳನ್ನು ಸಲ್ಲಿಸಿದ್ದು, ಈ ಬೇಡಿಕೆಗಳು ಮತ್ತು ಅವುಗಳಿಗೆ ಸಂಬಂಧಿಸಿದಂತೆ ಕೈಗೊಳ್ಳಲಾದ ಕ್ರಮದ ಮಾಹಿತಿಯನ್ನು ಪೆನ್‌ಡ್ರೈವ್‌ನಲ್ಲಿ ಅಳವಡಿಸಿ ಅನುಬಂಧ-2 ರಲ್ಲಿ ನೀಡಿದೆ.

**ಸಂಖ್ಯೆ:**RDPR 1091 GPA 2025

**(ಪ್ರಿಯಾಂಕ್ ಖರ್ಗೆ)**
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ
ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.

ಅನುಬಂಧ-2

ಗ್ರಾಮ ಪಂಚಾಯಿತಿ ನೌಕರರುಗಳ ಸೇವಾ ಭದ್ರತೆಯನ್ನೊಳಗೊಂಡು ವಿವಿಧ ಬೇಡಿಕೆಗಳು ಮತ್ತು ಕೈಗೊಳ್ಳಲಾದ ಕ್ರಮಗಳ ಮಾಹಿತಿ.

1. **ಗ್ರಾ.ಪಂ. ಸಿಬ್ಬಂದಿಗಳಿಗೆ ಆರೋಗ್ಯ ವಿಮೆಯನ್ನು ಈಗಾಗಲೇ ರೂ. 50,000/- ಗಳು ನೀಡುವಂತೆ ಆದೇಶ ಮಾಡಿದ್ದು, ಇದರಿಂದ ಯಾವ ನೌಕರರಿಗೂ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ಗ್ರಾಮ ಪಂಚಾಯಿತಿಯ ಕುಟುಂಬದವರಿಗೆ 5 ಲಕ್ಷ ಆರೋಗ್ಯ ವಿಮೆಯನ್ನು ಜಾರಿ ಮಾಡುವುದು.**

   ಸರ್ಕಾರದ ಆದೇಶ ಸಂಖ್ಯೆ:RDPR 7 GPC 2024, ದಿನಾಂಕ:10.08.2024ರನ್ವಯ ಗ್ರಾಮ ಪಂಚಾಯಿತಿ ನೌಕರರು ಅನಾರೋಗ್ಯಕ್ಕೆ ಒಳಗಾದಾಗ ಗರಿಷ್ಠ ರೂ.50,000/- ಗಳವರೆಗಿನ ಚಿಕಿತ್ಸಾ ವೆಚ್ಚವನ್ನು ಜಿಲ್ಲಾ ಪಂಚಾಯಿತಿಯ ಆಶ್ವಾಸನಾ ನಿಧಿಯಿಂದ ಭರಿಸಿ ಪಾವತಿಸಲು ಅವಕಾಶ ನೀಡಲಾಗಿರುತ್ತದೆ.

   ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಆಕುಕ 324 ಸಿಜಿಇ 2025, ದಿನಾಂಕ: 24.06.2025ರಲ್ಲಿ 2025-26ನೇ ಸಾಲಿನ ಬಜೆಟ್ ಘೋಷಣೆ ಕಂಡಿಕೆ 140 ರನ್ವಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಹಾಗೂ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 3 ಲಕ್ಷಕ್ಕೂ ಅಧಿಕ ಸಿಬ್ಬಂದಿ ಹಾಗೂ ಅವಲಂಬಿತರಿಗೆ 5 ಲಕ್ಷ ರೂ.ವರೆಗೆ ನಗದು ರಹಿತ ಆರೋಗ್ಯ ಭರವಸೆಗಾಗಿ ಯೋಜನೆ ರೂಪಿಸಿದ್ದು, ಗ್ರಾಮ ಪಂಚಾಯಿತಿ ನೌಕರರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಪರಿಶೀಲನೆಯಲ್ಲಿರುತ್ತದೆ.

2. **ವಾಟರ್ ಮ್ಯಾನ್ / ನೀರುಘಂಟಿಗಳಿಗೆ ವಾರಕ್ಕೆ ಒಂದು ದಿನ ರಜೆಯನ್ನು ನಿಗದಿಪಡಿಸುವುದು**

   ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯದ ಸುತ್ತೋಲೆ ಸಂಖ್ಯೆ.ಕೆಪಿಆರ್‌ಸಿ-ಜಿಪಿಎ/545/2024 ದಿನಾಂಕ: 19.02.2025 ರಲ್ಲಿ ಗ್ರಾಮ ಪಂಚಾಯಿತಿ ವಾಟರ್ ಆಪರೇಟರ್ ರವರುಗಳಿಗೆ ವಾರದ ರಜೆಗೆ ಅವಕಾಶ ನೀಡಿ ಆದೇಶಿಸಲಾಗಿದೆ.

3. **ಗ್ರಾಮ ಪಂಚಾಯಿತಿಯ ಪಂಚ ನೌಕರರುಗಳಿಗೆ ನಿವೃತ್ತಿ ಉಪದಾನವನ್ನು 60 ತಿಂಗಳ ವೇತನದ ಮೊತ್ತವಾಗಿ ಉಪದಾನವನ್ನು ನೀಡುವುದು.**

   ಕರ್ನಾಟಕ ಸಿವಿಲ್ ಸೇವಾ ನಿಯಮಗಳಲ್ಲಿ ಸರ್ಕಾರಿ ನೌಕರರಿಗೆ ಗರಿಷ್ಠ 20 ತಿಂಗಳವರೆಗೆ ನಿವೃತ್ತಿ ಉಪದಾನ ಮಂಜೂರು ಮಾಡಲು ಅವಕಾಶ ಕಲ್ಪಿಸಲಾಗಿದೆ. ಆದರಂತೆ, ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 886 ಗ್ರಾಪಂಕಾ 2016 ದಿನಾಂಕ:29.09.2020 ರನ್ವಯ ಗ್ರಾಮ ಪಂಚಾಯಿತಿ ನೌಕರರಿಗೆ ಪ್ರತಿ ವರ್ಷಕ್ಕೆ 15 ದಿನಗಳ ವೇತನದಂತೆ ಒಟ್ಟು 20 ತಿಂಗಳ ವೇತನ ಮೀರದಂತೆ ಮರಣ ಮತ್ತು ನಿವೃತ್ತಿ ಉಪದಾನ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

4. **1) ಕಾರ್ಯದರ್ಶಿ ಗ್ರೇಡ್-1 ವೃಂದದಿಂದ ಪಿಡಿಒ ವೃಂದಕ್ಕೆ ಈಗಿರುವ ಮುಂಬಡ್ತಿ ಅನುಪಾತವನ್ನು ಶೇಕಡ 35 ರಿಂದ 60ಕ್ಕೆ ಹೆಚ್ಚಿಸುವ ಬಗ್ಗೆ.**

   **2)ಗ್ರೇಡ್-2 ಕಾರ್ಯದರ್ಶಿ ಮತ್ತು ದ್ವಿತೀಯ ದರ್ಜೆ ಲೆಕ್ಕ ಸಹಾಯಕರ ಹುದ್ದೆಯಿಂದ ಗ್ರೇಡ್-1 ಕಾರ್ಯದರ್ಶಿ ಹುದ್ದೆಗೆ ಬಡ್ತಿ ಶೇ.35 ರಷ್ಟಿದ್ದು ಅದನ್ನು ಶೇ.80 ಕ್ಕೆ ಹೆಚ್ಚಿಸಬೇಕು.**

   **3)ಕರವಸೂಲಿಗಾರ ಮತ್ತು ಡಾಟಾ ಎಂಟ್ರಿ ಆಪರೇಟರ್ ವೃಂದದಿಂದ ಕಾರ್ಯದರ್ಶಿ ಗ್ರೇಡ್ - 2 ಪದೋನ್ನತಿಯನ್ನು ಶೇಕಡ 100% ಹೆಚ್ಚಿಸುವುದು.**

   **4) ಗ್ರಾಮ ಪಂಚಾಯತಿ ಕರವಸೂಲಿಗಾರರು ಮತ್ತು ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ವೃಂದದಿಂದ ಸೇವೆ ಒಳಗಿನ ನೇರ ನೇಮಕಾತಿಗೆ ಎಸ್.ಡಿ.ಎ.ಎ ವೃಂದಕ್ಕೆ ಪದೋನ್ನತಿ ಹೊಂದಲು 75% ರಷ್ಟು ಹೆಚ್ಚಳ ಮಾಡುವುದು.**

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿ/ನೌಕರರ ಬೇಡಿಕೆಗಳ ಬಗ್ಗೆ ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ ರವರ ಅಧ್ಯಕ್ಷತೆಯ ಸಮಿತಿಯಲ್ಲಿ ಈ ಬೇಡಿಕೆಗಳನ್ನು ಪರಿಶೀಲಿಸಲಾಗಿರುತ್ತದೆ, ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.

5. **ಗ್ರಾಮ ಪಂಚಾಯತಿಗಳಲ್ಲಿ ಕಂಪ್ಯೂಟರ್ ಆಪರೇಟರ್ ದಿನ ಆಚರಿಸುವ ಕುರಿತು.**

ಪಂಚಾಯತ್ ರಾಜ್ ಆಯುಕ್ತಾಲಯದ ಆದೇಶ ಸಂಖ್ಯೆ:ಕೆಪಿಆರ್‌ಸಿ-ಜಿಪಿಎ/43/2023 ದಿನಾಂಕ:23.12.2024 ರಲ್ಲಿ ಪ್ರತಿ ವರ್ಷ ಡಿಸೆಂಬರ್ 26 ರಂದು ಉತ್ತಮ ಆಡಳಿತ ದಿನಾಚರಣೆಯೊಂದಿಗೆ ಕಂಪ್ಯೂಟರ್ ಆಪರೇಟರ್ ದಿನವನ್ನು ಆಚರಿಸುವಂತೆ ಆದೇಶಿಸಿದೆ.

6. **ಇ.ಎಸ್.ಐ. ಮತ್ತು ಪಿ.ಎಫ್ ಜಾರಿ ಮಾಡುವುದು.**

ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 30 ಗ್ರಾಪಂಸಿ 2008, ದಿನಾಂಕ:30.10.2008ರನ್ವಯ ರಾಜ್ಯದ ಎಲ್ಲಾ ಗ್ರಾಮ ಪಂಚಾಯಿತಿ ಸಿಬ್ಬಂದಿಗಳಿಗೆ ಭವಿಷ್ಯ ನಿಧಿ ಯೋಜನೆ ಜಾರಿಗೆ ತರಲಾಗಿರುತ್ತದೆ.

ಮುಂದುವರೆದು, ಗ್ರಾಮ ಪಂಚಾಯಿತಿ ಸಿಬ್ಬಂದಿಗಳ ಆರೋಗ್ಯ ಸುರಕ್ಷತೆಗೆ ಸಂಬಂಧಿಸಿದಂತೆ, ಈಗಾಗಲೇ ಸರ್ಕಾರದ ಆದೇಶ ಸಂಖ್ಯೆ:RDPR 7 GPC 2024, ದಿನಾಂಕ:10.08.2024ರನ್ವಯ ಗ್ರಾಮ ಪಂಚಾಯಿತಿ ನೌಕರರು ಅನಾರೋಗ್ಯಕ್ಕೆ ಒಳಗಾದಾಗ ಗರಿಷ್ಠ ರೂ.50,000/- ಗಳವರೆಗಿನ ಚಿಕಿತ್ಸಾ ವೆಚ್ಚವನ್ನು ಜಿಲ್ಲಾ ಪಂಚಾಯಿತಿಯ ಆಶ್ವಾಸನಾ ನಿಧಿಯಿಂದ ಭರಿಸಿ ಪಾವತಿಸಲು ಅವಕಾಶ ನೀಡಲಾಗಿರುತ್ತದೆ.

ಮುಂದುವರೆದು, ಸರ್ಕಾರದ ಆದೇಶ ಸಂಖ್ಯೆ:ಆಕುಕ 324 ಸಿಜಿಇ 2025, ದಿನಾಂಕ: 24.06.2025ರಲ್ಲಿ 2025-26ನೇ ಸಾಲಿನ ಬಜೆಟ್ ಘೋಷಣೆ ಕಂಡಿಕೆ 140 ರನ್ವಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಗುತ್ತಿಗೆ/ಹೊರಗುತ್ತಿಗೆ ಹಾಗೂ ಗೌರವಧನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ 3 ಲಕ್ಷಕ್ಕೂ ಅಧಿಕ ಸಿಬ್ಬಂದಿ ಹಾಗೂ ಅವಲಂಬಿತರಿಗೆ 5 ಲಕ್ಷ ರೂ.ವರೆಗೆ ನಗದು ರಹಿತ ಆರೋಗ್ಯ ಭರವಸೆಗಾಗಿ ಯೋಜನೆ ರೂಪಿಸಿದ್ದು, ಗ್ರಾಮ ಪಂಚಾಯಿತಿ ನೌಕರರನ್ನು ಈ ಯೋಜನೆಯ ವ್ಯಾಪ್ತಿಗೆ ಒಳಪಡಿಸಲು ಪರಿಶೀಲನೆಯಲ್ಲಿರುತ್ತದೆ.

7. **ಕಾರ್ಯದರ್ಶಿ ಗ್ರೇಡ್ -2 ಹಾಗೂ ಎಸ್ ಡಿ ಎ ಎ ನೇರ ನೇಮಕಾತಿ ಹುದ್ದೆಗಳನ್ನು ಗ್ರಾಮ ಪಂಚಾಯಿತಿಯ ಕರವಸೂಲಿಗಾರರಿಗೆ ಹಾಗೂ ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ ರವರಿಗೆ ಒಂದು ಬಾರಿ ಮುಂಬಡ್ತಿಗೆ ಅವಕಾಶ ಕೊಡುವುದು.**

ನಿಯಮಗಳಡಿಯಲ್ಲಿ ಅವಕಾಶವಿರುವುದಿಲ್ಲ.

8. **ಆರ್ಥಿಕ ಇಲಾಖೆಯಲ್ಲಿ ಬಾಕಿ ಇರುವ ಸೇವಾ ಹಿರಿತನ ವೇತನ ಮತ್ತು ವೇತನ ಹೆಚ್ಚಳದ ಆದೇಶ ಜಾರಿ ಮಾಡುವ ಎರಡು ಕಡತ ಅನುಮೋದನೆ ನೀಡುವುದು.**

ಸೇವಾ ಹಿರಿತನದ ಆಧಾರದ ಮೇಲೆ ಸಿಬ್ಬಂದಿಯ ವೇತನ ಹೆಚ್ಚಳ ಮಾಡುವ ಸಲುವಾಗಿ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಆದರೆ, ಈ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯಿಂದ ಸಹಮತಿ ದೊರೆತಿರುವುದಿಲ್ಲ. ವೇತನ ಹೆಚ್ಚಳದ ಕುರಿತಾಗಿ ಸಹ ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಪರಿಶೀಲನೆಯಲ್ಲಿರುತ್ತದೆ.